1992-93, 1993-94 ಹಾಗೂ 1994-95ನೇ ಸಾಲುಗಳ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ 66ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ

(1) ಗುಲ್ಬರ್ಗಾ ವಿಶ್ವ ವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಇಡುವ ಬಗ್ಗೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವ ಮಾತು ಎಲ್ಲಾ ಕಡೆಯೂ ಕೇಳಿಬರುತ್ತಾ ಇದೆ. ನನಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ದುಃಖ ತರುವಂಥ ಸಂಗತಿಯೆನೆಂದರೆ, ಆ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವುದಕ್ಕಿಂತ ಹೆಚ್ಚು ನೋವನ್ನು ತರುತ್ತಿರುವಂಥ ಸಂಗತಿ, ಅವರ ಹೆಸರನ್ನು ಇಡಬೇಕೆದು 60-70 ಜನ ಶಾಸಕರು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಮೇಲೆ ಅನೇಕ ಜಾತಿಬೇಧ ಸಂಘಸಂಸ್ಥೆಗಳು ಸರ್ಕಾರಕ್ಕೆ ವಿನಂತಿಯನ್ನು ಮಾಡಿದಮೇಲೆ, ಈ ಒಂದು ಹೆಸರನ್ನು ಇಡಬೇಕೆಂದು ರಾಜ್ಯದಲ್ಲಿ ಹೋರಾಟ ಮಾಡುವಂಥ ಪರಿಸ್ಥಿತಿ ಇಮೊತ್ತು ರಾಜ್ಯದಲ್ಲಿ ನಡೆಯುತ್ತಾ ಇದೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ ಜೊತೆಗೆ ಇವೊತ್ತು ನಾನು ಬಂದತಕ್ಷಣ ಈ ಮಾತನ್ನು ಕೇಳಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವಂಥದ್ದು, ಶಾಸಕರು ಈಗಾಗಲೇ ಮನವಿಯನ್ನು ಕೊಟ್ಟಿದ್ದಾರೆ. ಒಬ್ಬ ಕಾಯಕ ಪುರುಷ ಬಸವಣ್ಣನವರಂಥ ವ್ಯಕ್ತಿ ಬಗ್ಗೆ ಆ ವಿಶ್ವವಿದ್ಯಾನಿಲಯಕ್ಕೆ ಹೆಸರನ್ನು ಇಡಬೇಕು ಎಂದು ಕೇಳಿದಾಗ ಒಂದು ಕ್ಷಣ ತಡಮಾಡದೆ ತಾವು ಒಪ್ಪಿಕೊಳ್ಳಬೇಕಾಗಿತ್ತು ಎಂಬುದು ನನ್ನ ಭಾವನೆ. ನಾನು ಈಗ ತಮ್ಮಲ್ಲಿ ವಿನಂತಿ ಮಾಡುತ್ತಿರುವಂಥದ್ದು, ಈಗಾಗಲೇ ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಬೀದರನಲ್ಲಿ ಈ ಒಂದು ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯ ಮಾಡಿ 16.0296ರಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದನ್ನು ನಾನು ಕೇಳಿದ್ದೇನೆ. ನಾನು ಉಪಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಜೆ.ಹೆಚ್. ಪಟೇಲರಲ್ಲಿ ವಿನಂತಿ ಮಾಡುತ್ತೇನೆ. ಬಸವ, ಬುದ್ಧ, ಅಂಬೇಡ್ಕರ್, ಇವರೆಲ್ಲಾ ಮಾನವ ಜನಾಂಗಕ್ಕೆ ಸೇರಿದ ವಿಭೂತಿ ಪುರುಷರು. ಇಂತಹವರ ಹೆಸರನ್ನು ಇಡುವ ಪ್ರಶ್ನೆ ಬಂದಾಗ, ಅವರ ಮನಸ್ಸಿನ ಭಾವನೆಯನ್ನು ಅರ್ಥಮಾಡಿಕೊಂಡಾಗ ಒಂದು ರೀತಿ ಗುಲ್ಬರ್ಗಾ ಬಸವಣ್ಣನವರ ಕಾಯಕ ಕ್ಷೇತ್ರ. ಅಲ್ಲಿ ಈ ಪ್ರಶ್ನೆ ಬಂದಾಗ ದಯಮಾಡಿ ಯಾವ ಕಾರಣಕ್ಕೂ ಸಹ ಇಲ್ಲಿ ಕುಳಿತಂಥಹವರು ರಾಜಕಾರಣ ಕೆಲಸಕ್ಕೆ ನಾವು ಸಿದ್ಧರಿಲ್ಲ. ಬಹುಶಃ ಇಲ್ಲಿರುವಂಥ, ಆ ಮನೆಯಲ್ಲಿ ನರಸಿಂಹಮೂರ್ತಿಯವರಂಥ ಹಿರಿಯರು ಅನೇಕ ದಲಿತ ಸಂಘಟನಾ ಸಮಿತಿಯ ಮುಖಂಡರು, ಎಲ್ಲರೂ ಸಹ ಒಕ್ಕೊರಲಿನಿಂದ ಅಲ್ಲಿಗೆ ಬಸವೇಶ್ವರ ವಿಶ್ವವಿದ್ಯಾನಿಲಯ

ಎಂದು ಹೆಸರನ್ನು ಇಡಬೇಕೆಂಬ ಒತ್ತಾಯವನ್ನು ಎಲ್ಲಾ ಕಡೆ ಮಾಡಿದ್ದಾರೆ. ಬಸವಧರ್ಮ ಸಮ್ಮೇಳನದ ಸಂದರ್ಭದಲ್ಲಿ 13.05.90ರಲ್ಲಿ ಗೃಹಸಚಿವರು ಇದ್ದಂಥ ಕಾಲದಲ್ಲಿ ಅವರಿಗೆ ಆ ಬಗ್ಗೆ ವಿನಂತಿಯನ್ನು ಮಾಡಿದಾಗ ಅದಕ್ಕೆ ಒಪ್ಪಿ, ಆಯಿತು ಅದನ್ನು ಸರ್ಕಾರದ ಗಮನಕ್ಕೆ ತಂದಾಗ ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇನೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದರೆಂದು ನಾನು ಕೇಳಿದ್ದೇನೆ. ಇಂತಹ ಒಂದು ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಇದಕ್ಕೆ 6ನೇ ತಾರೀಖಿನಿಂದ ರಾಜ್ಯಾದ್ಯಂತ ರಸ್ತೆ ರೋಕೋ ಚಳುವಳಿ ಮಾಡುವುದು, ಹೋರಾಟ ಮಾಡುವುದು, ಇದರ ಅಗತ್ಯ ಏನು? ನಾನು ಇದಕ್ಕೆ ಬೆಂಬಲವನ್ನು ಕೊಡುತ್ತೇನೆ ಎಂದು ಹೇಳುವುದಿಲ್ಲ. ಇದರ ಅಗತ್ಯವೂ ಇಲ್ಲ. ಒಂದು ಕ್ಷಣ ಆ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಇಡಬೇಕೆಂದು ಹೋರಾಟ ಮಾಡುವಂಥ ಪರಿಸ್ಥಿತಿ ಬಂದಿರುವುದೇ ದುರ್ದೈವದ ಸಂಗತಿ ಎಂದು ನಾನಾದರೂ ಸಹ ಭಾವಿಸುತ್ತೇನೆ. ನೀವೆಲ್ಲರೂ ಸಹ, ಸದನದಲ್ಲಿರುವಂಥ ಯಾರೊಬ್ಬರೂ ಸಹ ಈ ವಿಶ್ವವಿದ್ಯಾನಿಲಯಕ್ಕೆ ಆ ಹೆಸರನ್ನು ಇಡಬೇಕೆನ್ನುವುದಕ್ಕೆ ಒಂದು ಕ್ಷಣ ಚಿಂತನೆ ಮಾಡುವುದಕ್ಕೆ, ಪರಿಶೀಲನೆ ಮಾಡುವಂಥ ಪರಿಸ್ಥಿತಿ ಇದೆ ಎಂದು ನಾನಾದರೂ ತಿಳಿದುಕೊಂಡಿಲ್ಲ. ಎಂಟುನೂರು ವರ್ಷಗಳ ಹಿಂದೆ ಕಂಡು ಕೇಳರಿಯದಂತೆ ಒಂದು ಮಹಾನ್ ಕ್ರಾಂತಿಯನ್ನು ಮಾಡಿದಂಥ ಮಹಾನ್ ವ್ಯಕ್ತಿ. ಅಸ್ಪೃಶ್ಯತೆ ವಿರುದ್ಧ ದೊಡ್ಡ ಹೋರಾಟ ಮಾಡಿದಂಥ ಮಹಾನ್ ವ್ಯಕ್ತಿ. ಕಾಯಕವೇ ಕೈಲಾಸ ಎಂದು ಹೋರಾಟ ಮಾಡಿ, ಒಬ್ಬ ವಿಭೂತಿಪುರುಷನ ಹೆಸರನ್ನು ಇಡಬೇಕಾಗಿರುವಂಥದ್ದು ಆ ಕ್ಷೇತ್ರದಲ್ಲಲ್ಲದೆ, ಮತ್ತೆ ಎಲ್ಲಿ ಇಡಬೇಕು? ಅದಕ್ಕೋಸ್ಕರ, ಸನ್ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಅವರು ಮುಖ್ಯಮಂತ್ರಿಗಳಿಗೆ ಹೇಳಿ, ಯಾವುದೇ ಹೋರಾಟಕ್ಕೆ ಅವಕಾಶವನ್ನು ಮಾಡಿಕೊಡದೆಯೇ ತಾವು ಈ ಹೋರಾಟ ಮಾಡುತ್ತಿರುವಂತವರಿಗೆ ಕರೆಕೊಟ್ಟು ಇದೆಲ್ಲಾ ಬಂದ್ ಮಾಡಿ, ಇದರ ಅಗತ್ಯ ಇಲ್ಲ, ಈ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರರ ಅಭಿಮಾನಿಗಳಿದ್ದಾರೆ. ಅಂತಹ ಒಬ್ಬ ತ್ಯಾಗಮೂರ್ತಿಯ ಹೆಸರನ್ನು ಇಡುವುದಕ್ಕೆ ಮೀನ ಮೇಷ ಎಣಿಸುವಂಥದ್ದು, ಆ ಬಗ್ಗೆ ಒಂದು ಹೋರಾಟ ಮಾಡಿ ನಂತರ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಇಟ್ಟರು ಎನ್ನುವುದನ್ನು ಕಿವಿಗೆ ಕೇಳುವುದೇ ಬಹುಶಃ ಇದೊಂದು ನಮ್ಮೆಲ್ಲರಿಗೂ ನೋವು ತರುವಂಥ ಸಂಗತಿ ಎಂದು ನಾನಾದರೂ ಭಾವಿಸುತ್ತೇನೆ. ಅದಕ್ಕಾಗಿ ದಯಮಾಡಿ ತಾವು ಈ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಕಾರ್ಯಕ್ರಮವನ್ನು ಘೋಷಣೆ ಮಾಡಬೇಕು. ಈ ರೀತಿ ಚಳುವಳಿ, ಸತ್ಯಾಗ್ರಹ ಇದು ಯಾವುದು ಆಗುವುದಕ್ಕೆ ಅವಕಾಶ ನೀಡದೆ ಅದಕ್ಕೆ ಮಂಗಳ ಹಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜೆ.ಎಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಸರ್ವಸಮ್ಮತಿಯಿಂದ ಬಸವೇಶ್ವರರ ಹೆಸರನ್ನು ಆ ವಿಶ್ವವಿದ್ಯಾನಿಲಯಕ್ಕೆ ಇಡಬೇಕೆಂದು ಅಭಿಪ್ರಾಯ ಪಟ್ಟರೆ ನಾವು ತಡ ಮಾಡುವುದಿಲ್ಲ. ಆದರೆ ಇಂತಹ ಹೆಸರನ್ನು ಇಡುವಾಗ ಭಾವನಾತ್ಮಕವಾದಂಥ, ಯಾರು ಇದಕ್ಕೆ ಅಕ್ಷೇಪಣೆಯನ್ನೂ, ಮತ್ತೊಂದು ಮಾಡಿದರೆ ಅದನ್ನು ಸರ್ಕಾರ ಪುರಸ್ಕರಿಸುವುದಕ್ಕಾಗುವುದಿಲ್ಲ. ನಾನು ಹೇಳುತ್ತಿರುವುದು ಬಸವೇಶ್ವರರ ಹೆಸರಿಗೆ ಏನಾದರೂ ಒಂದು

ಸಲಹೆ ಬಂದರೆ ಅದು ಸರ್ವಸ್ಸು ಎಕೆಂದರೆ ಅವರು ಯಾವುದೋ ಒಂದು ಜನಾಂಗಕ್ಕೆ ಸೇರಿದವರಲ್ಲ. ಬಹಳ ಜನ ತಿಳಿದುಕೊಂಡಿರಬಹುದು ಬಸವೇಶ್ವರರು ಲಿಂಗಾಯಿತರಿಗೂ ಬಸವೇಶ್ವರರಿಗೂ ಅಥವಾ ವೀರಶೈವ ಧರ್ಮಕ್ಕೂ ಬಸವೇಶ್ವರಿಗೂ ಬಹಳ ವ್ಯತ್ಯಾಸ ಇದೆ. ಇದನ್ನು ಸರ್ವಸಮ್ಮತಿಯಿಂದ ಸದನದಲ್ಲಿ ಅಭಿಪ್ರಾಯ ಪಟ್ಟರೆ ನನ್ನದೇನೂ ಆಭ್ಯಂತರ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೋಡಿ, ಆ ಮನೆಯಲ್ಲಿ ನರಸಿಂಹಮೂರ್ತಿಯವರು ಹೇಳಿದ್ದಾರೆ, ದಲಿತ ಸಂಘರ್ಷ ಸಮಿತಿಯ ಅನೇಕ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. 65-70 ಜನ ಶಾಸಕರುಗಳು ಪತ್ರ ಬರೆದಿದ್ದಾರೆ. ಸನ್ಯಾಸ ಖರ್ಗೆಯವರನ್ನು ಭೇಟಿ ಮಾಡಿದಾಗ ಅವರೂ ಸಹ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಇಲ್ಲಿರುವಂಥ ಯಾರೊಬ್ಬರಿಗೂ ಸಹ ವಿರೋಧ ಇರಲಿಕ್ಕೆ ಸಾಧ್ಯವಿಲ್ಲ. ಯಾರಿಗೆ ನಾವು ಶಿವಮೊಗ್ಗ ಜಿಲ್ಲೆಯಲ್ಲಿ ಕುವೆಂಪು ವಿಶ್ವವಿದ್ಯಾಲಯ ಎಂದು ಹೆಸರಿಟ್ಟವೋ, ಆ ಕುವೆಂಪು ರವರು ಬಸವೇಶ್ವರರ ಬಗ್ಗೆ ಏನು ಹೇಳುತ್ತಾರೆ ಸಾಮಾಜಿಕ ದೃಷ್ಟಿಯಿಂದ ಬಸವೇಶ್ವರರಷ್ಟು ಅದ್ಭುತವಾಗಿ ಕೆಲಸ ಮಾಡಿದವರು ಯಾರೂ ಇಲ್ಲ. ಬಸವೇಶ್ವರರು ಹೋದಮೇಲೆ ಈಗಲೂ ಯಾರೂ ಬಂದಿಲ್ಲ. ಅವರು ಒಬ್ಬ ಬ್ರಾಹ್ಮಣ ಹುಡುಗಿಯನ್ನು ಒಬ್ಬ ಹೊಲಿಯನಿಗೆ ಮದುವೆ ಮಾಡಿಸಿದ್ದಾರೆ. ಎಂಟುನೂರು ವರ್ಷಗಳ ಹಿಂದೆ ಯಾವ ಧೈರ್ಯದಿಂದ ಮಾಡಿರಬೇಕು. ಏನು ಕೆಚ್ಚು ಅವರಲ್ಲಿ ಇಡಬೇಕು ನೋಡಿ. ನಮ್ಮ ದೇಶ ಆ ಬಸವೇಶ್ವರರ ವಿಚಾರವನ್ನು ಮುಂದುವರೆಸಿಕೊಂಡು ಹೋಗಿದ್ದರೆ, ಒಂದು ವಿಚಾರವನ್ನು ಒಪ್ಪಿಕೊಂಡಿದ್ದು ಪಕ್ಷದಲ್ಲಿ ಮುಸ್ಲೀಮರು ಕ್ರಿಶ್ಚಿಯನ್ನರು ಎಲ್ಲಾ ಇಲ್ಲಿಗೆ ಬಂದು ಬೇರು ಬಿಡುತ್ತಾ ಇರಲಿಲ್ಲ. ನಾನು ಹೇಳುವ ವಿಶ್ವಮಾನವ ತತ್ವ ಎಂದೋ ಬರುತ್ತಿತ್ತು. ಈ ಮಾತನ್ನು ಸ್ಪಷ್ಟವಾಗಿ ನಿಷ್ಪಕ್ಷಪಾತವಾಗಿ ಬರೆಯಿರಿ. ಏಕೆಂದರೆ ನಮ್ಮಲ್ಲಿ ಅನೇಕ ದೊಡ್ಡ ದೊಡ್ಡ ಸಾಹಿತಿಗಳು ಇದ್ದಾರೆ. ಸಾಹಿತ್ಯದ ದೃಷ್ಟಿಯಲ್ಲಿ ಅದು ಮಹೋನ್ನತವು ಹೌದು, ಆದರೆ ಸಾಮಾಜಿಕ ದೃಷ್ಟಿಯಿಂದ ಇನ್ನು ಸಂಪ್ರದಾಯಕ್ಕೆ ಕೈಕಟ್ಟಿ ಕುಳಿತಿದ್ದಾರೆ, ಅಂಟಿಕೊಂಡಿದ್ದಾರೆ. ಮಠಾಧೀಶರನ್ನು ಬಿಟ್ಟು ಬಿಡಿ. ನಾನು ಏಕೆ ಈ ಮಾತನ್ನು ರೆಫರ್ ಮಾಡುತ್ತಿದ್ದೇನೆ ಎಂದರೆ ನಾಟ್ ದಟ್. ನಾನು ಯಾರೋ ಸರ್ಟಿಫಿಕೇಟ್ ಕೊಟ್ಟರು ಎಂದು ಹೇಳುತ್ತಾ ಇಲ್ಲ. ನಾನು ಹೇಳುತ್ತಿರುವಂಥಾದ್ದು ಈ ಸದನದಲ್ಲಿ ಯಾರೊಬ್ಬರೂ ಇದಕ್ಕೆ ವಿರೋಧವಿಲ್ಲ. ನಮ್ಮ ಮೌನವೇ ಇದಕ್ಕೆ ಸಮ್ಮತಿ . ದಯಮಾಡಿ ನಾಳೆ ನೀವು ಅದನ್ನು ಘೋಷಣೆ ಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ಈಗ ಸರ್ವ ಸಮ್ಮತಿಯಿಂದ ಈ ಸದನ ಅಪೇಕ್ಷೆ ಪಟ್ಟರೆ ಸರ್ಕಾರ ಬೇಡ ಎನ್ನುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲರ ಒಪ್ಪಿಗೆ ಇದೆ, ಯಾವುದೇ ಪ್ರಶ್ನೆ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಸದನ ಸರ್ವಸಮ್ಮತಿಯಿಂದ ಈ ಅಭಿಪ್ರಾಯವನ್ನು ಕೊಟ್ಟಿದೆ. ಸರ್ಕಾರ ತತಕ್ಷಣ ಜಾರಿಗೆ ತರುತ್ತದೆ.